ವಿಶೇಷ ಎಚ್ಚರಿಕೆ

1. ಗಂಡು ಕರುಗಳಿಗೆ ಲಸಿಕೆ ಹಾಕಿಸಬಾರದು
2. ಗರ್ಭಧರಿಸಿದ ಹಸುಗಳಿಗೆ ಲಸಿಕೆ ಮಾಡಿದಲ್ಲಿ ಗರ್ಭಪಾತವಾಗುವ ಸಂಭವವಿರುತ್ತದೆ
3. ಲಸಿಕೆಯ ಸಂಪರ್ಕಕ್ಕೆ ಬಂದ ವ್ಯಕ್ತಿಗಳಿಗೆ ಸೋಂಕು ಉಂಟಾಗುವ ಸಾಧ್ಯತೆಯಿರುವ್ಯದರಿಂದ ಲಸಿಕೆ ಹಾಕುವವರು ಸೂಕ್ತ ಮುನ್ನೆಚ್ಚರಿಕೆವಹಿಸಬೇಕು.

ಮನುಷ್ಯರಲ್ಲಿ ಬ್ರುಸೆಲ್ಲೋಸಿಸ್ ಲಕ್ಷಣಗಳು

- ರೋಗಪೀಡಿತ ರಾಸುವಿನಿಂದ ಹಿಂಡಲ್ಪಟ್ಟ ಹಸಿ ಹಾಲನ್ನು ಕುಡಿಯುವ ಮೂಲಕವಾಗಲೀ ಅಥಾವ ಗರ್ಭಕೋಶದ ಸ್ರವಿಕೆಯ ಸಂಪರ್ಕಕ್ಕೆ ಬರುವ ಮೂಲಕವಾಗಲಿ ಈ ರೋಗ ಮನುಷ್ಯರಿಗೂ ಸೋಂಕುಬಹುದಾಗಿದ್ದು ಅದನ್ನು'ಏರಿಳಿತದ ಜ್ವರ' (Undulant Fever) ಎಂಬುದಾಗಿ ಕರೆಯಲಾಗುತ್ತದೆ
- ಗಾಯಗಳ ಮೂಲಕ ಈ ರೋಗಾಣು ಮನುಷ್ಯನ ದೇಹವನ್ನುಸುಲಭವಾಗಿ ಪ್ರವೇಶಿಸಬಹುದು
- ಸೋಂಕಿತ ತಾಯಿಯಿಂದ ಮಗುವಿಗೆ ಸ್ತನ್ಯಪಾನದ ಮೂಲಕವೂ ಈ ರೋಗ ಹರಡಬಹುದು

ಮನುಷ್ಯರಲ್ಲಿ ಬ್ರುಸೆಲ್ಲೋಸಿಸ್ ಲಕ್ಷಣಗಳು

- ತಲೆನೋವು, ಮೈಕೈನೋವಿನೊಂದಿಗೆ ಹಾಸಿಗೆ ಹಿಡಿಯುವಂತೆಆಗುತ್ತದೆ
- ಏರುಪೇರಾಗುವಜ್ವರ, ಮಂಡಿ, ಭುಜ, ಮೊಣಕೈ, ಮೊದಲಾದ ಕೀಲುಗಳಲ್ಲಿ ನೋವು, ಸೊಂಟ ನೋವು ಮತ್ತುಕತ್ತಿನ ಸ್ನಾಯುಗಳ ನೋವು ಕಾಣಿಸಿಕೊಳ್ಳುವುದು
- ವಾಸನೆಯಿಂದಕೂಡಿದ ಬೆವರು, ಮಂಕಾದ ಕಣ್ಣುಗಳು ಮತ್ತುಅಶಕ್ತತೆ ಇವು ರೋಗಿಗಳಲ್ಲಿ ಕಂಡು ಬರುವಇತರ ಲಕ್ಷಣಗಳಾಗಿವೆ
- ರೋಗವುಉಲ್ಬಣಗೊಂಡುಗಂಡಸರಲ್ಲಿ ನಪುಂಸಕತೆಉಂಟಾಗಬಹುದು.

- ಸೂಕ್ತ ಸಮಯದಲ್ಲಿಚಿಕಿತ್ಸೆಗೆಒಳಪಡಿಸಿದಲ್ಲಿರೋಗವು ವಾಸಿಯಾಗುವುದು

ಮಾನವರಲ್ಲಿ ಬ್ರೂಸೆಲ್ಲೋಸಿಸ್ ರೋಗಕ್ಕೆಚಿಕಿತ್ಸೆ

- ಚಿಕಿತ್ಸೆಗೆ ಮೊದಲುನುರಿತ ಅಧಿಕಾರಿಗಳಿಂದರೋಗನಿರ್ಣಯ (Diagnosis) ಮಾಡಿಸಿಕೊಳ್ಳುವುದು ಅವಶ್ಯಕ
- ಚಿಕಿತ್ಸೆಯನ್ನುನುರಿತ ವೈದ್ಯರಿಂದ ಮಾತ್ರ ಪಡೆಯಬೇಕು.
- ವಯಸ್ಕರಲ್ಲಿ ಲಘು ಸೋಂಕಿಗೆ–ಪ್ರತಿದಿನRifampicin 600-900 mg ಮತ್ತು200mgdoxycyclinನ್ನು6 ವಾರಗಳ ವರೆಗೆಮೌಖಿಕವಾಗಿ ಸೇವಿಸಲು ವಿಶ್ವಆರೋಗ್ಯ ಸಂಸ್ಥೆ (WHO) ಸೂಚಿಸಿದೆ.
- ಚಿಕಿತ್ಸೆ ಸಮಯಕ್ಕೆ ಸರಿಯಾಗಿಆರಂಭಿಸಬೇಕು. ವೈದ್ಯರ ಸಲಹೆಯಂತೆ ಪೂರ್ಣಾವಧಿಯವರೆಗೆ ಪ್ರತಿಜೀವಕಗಳ ಸಂಯೋಜನೆಯನ್ನು ಸೇವಿಸಬೇಕು. ಇಲ್ಲವಾದರೆಅಪೂರ್ಣಚೇತರಿಕೆ ಮತ್ತುರೋಗ ಮರುಕಳಿಸುವ ಅಪಾಯವಿದೆ.

ಲೇಖಕರು : ಡಾ. ಪ್ರಹ್ಲಾದ
ಡಾ. ಜೆ.ಎನ್. ಶ್ರೀಧರ
ಪ್ರಕಾಶಕರು : ಡಾ.ಜಿ.ಎಸ್. ಯಡಹಳ್ಳಿ
ಹಿರಿಯವಿಜ್ಞಾನಿ ಮತ್ತು ಮುಖ್ಯಸ್ಥರು
ಕೃಷಿ ವಿಜ್ಞಾನ ಕೇಂದ್ರ, ರಾಯಚೂರು.
ಪುಟ ವಿನ್ಯಾಸ: ದೇವರಾಜ ನಾಯಕ
ಅಕ್ಷರಜೋಡಣೆ: ಕು. ಸುಮಂಗಳಮ್ಮ ಎಂ.

ಹೆಚ್ಚಿನ ಮಾಹಿತಿಗಾಗಿ ಸಂರ್ಪಕಿಸಿ

ಐಸಿಎಆರ್–ಕೃಷಿ ವಿಜ್ಞಾನಕೇಂದ್ರ,
ಅಂಚೆ ಪೆಟ್ಟಿಗೆ ಸಂಖ್ಯೆ–329, ರಾಯಚೂರು–584102
ದೂರವಾಣಿ ಸಂಖ್ಯೆ: 0832–220196


ಕೃಷಿ ಸಮಸ್ಯೆಗಳ ಪರಿಹಾರಕ್ಕಾಗಿರೈತರಉಚಿತ ಸಹಾಯವಾಣಿ : 1800–425–0470

ಪ್ರತಿಗಳು : 1000

UASR/PC/LL-16/2019-20

ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ರಾಯಚೂರು

ಐಸಿಎಆರ್–ಕೃಷಿ ವಿಜ್ಞಾನ ಕೇಂದ್ರ, ರಾಯಚೂರು



ಬ್ರೂಸೆಲ್ಲೋಸಿಸ್ – ಕಂದು ರೋಗ /ಸಾಂಸರ್ಗಿಕ ಗರ್ಭಪಾತ ರೋಗ 2019–20

ಐ.ಸಿ.ವಿ.ಆರ್–ಕೃಷಿ ವಿಜ್ಞಾನ ಕೇಂದ್ರ, ರಾಯಚೂರು 584 104

ಕೃಷಿ ಸಮಸ್ಯೆಗಳ ಪರಿಹಾರಕ್ಕಾಗಿ ರೈತರ ಉಚಿತ ಸಹಾಯವಾಣಿ : 1800–425–0470

"ಬ್ರೂಸೆಲ್ಲೋಸಿಸ್"ಎಂದರೇನು?

❖ ಬ್ರೂಸೆಲ್ಲಾ 'ಗುಂಪಿಗೆ ಸೇರಿದ ಬ್ಯಾಕ್ಟೀರಿಯಾದಿಂದ ಈ ರೋಗವು ಹಸು, ಎಮ್ಮೆ, ಆಡು, ಕುರಿ, ಹಂದಿ ನಾಯಿ, ಒಂಟೆ ಮತ್ತು ಕುದುರೆ ಮುಂತಾದ ಪ್ರಾಣಿಗಳಲ್ಲಿ ಕಂಡುಬರುತ್ತದೆ. ಹಸುಗಳಲ್ಲಿ ಬ್ರೂಸೆಲ್ಲಾ ಅಬಾರ್ಟಸ್, ಕುರಿಗಳಲ್ಲಿ ಬ್ರೂಸೆಲ್ಲಾ ಮೆಲಿಟೆನ್ಸಿಸ್, ಆಡುಗಳಲ್ಲಿ ಬ್ರೂಸೆಲ್ಲಾ ಓವಿಸ್ ಮತ್ತು ಬ್ರೂಸೆಲ್ಲಾ ಮೆಲಿಟೆನ್ಸಿಸ್, ಹಂದಿಗಳಲ್ಲಿ ಬ್ರೂಸೆಲ್ಲಾ ಸೂಯಿಸ್ ಮತ್ತು ನಾಯಿಗಳಲ್ಲಿ ಬ್ರೂಸೆಲ್ಲಾ ಕೆನಿಸ್ ರೋಗಾಣುವಿನಿಂದ ಈ ರೋಗ ಬರುತ್ತದೆ

❖ ಜಾನುವಾರುಗಳಲ್ಲಿ ಗರ್ಭಪಾತ, ಅನಾರೋಗ್ಯ ಉತ್ಪಾದನೆಯಲ್ಲಿ ಕುಸಿತ ಹಾಗೂ ಬಂಜೆತನಉಂಟಾಗಿ ಪಶುಪಾಲಕರು ನಷ್ಟಕ್ಕೊಳಗಾಗುತ್ತಿದ್ದಾರೆ. ನಮ್ಮ ದೇಶದಲ್ಲಿ ಇದು ದೇಶಾದ್ಯಂತ ವ್ಯಾಪಿಸಿದ್ದು ವಾರ್ಷಿಕ ರೂ. 35 ಕೋಟಿಗಳಷ್ಟು ನಷ್ಟ ಉಂಟುಮಾಡುತ್ತಿದೆ.

❖ ಈ ರೋಗವು ಮನುಷ್ಯರಿಗೂ ಬರುವ ಸಾಧ್ಯತೆ ಸಾಕಷ್ಟಿದ್ದು, ಇದನ್ನುಒಂದು ಪ್ರಮುಖ "ಪ್ರಾಣಿಜನ್ಯ ಮಾನವರ ರೋಗ" (Zoonotic disease) ವೆಂದು ಪರಿಗಣಿಸಲಾಗಿದೆ. ಪಶು ವೈದ್ಯರು, ಹಸು, ಕುರಿ ಮತ್ತು ಆಡು ಮುಂತಾದ ಪ್ರಾಣಿಗಳನ್ನು ಸಾಕುವವರು ಮತ್ತು ಮಾಂಸ ಮಾರಾಟಗಾರರು ಹೆಚ್ಚಾಗಿ ರೋಗದ ಸಂಪರ್ಕಕ್ಕೆ ಬರುವುದರಿಂದ ಇದೊಂದು " ವೃತ್ತಿ ಸಂಬಂಧಿತ ಕಾಯಿಲೆ" ಎಂದು ಪರಿಗಣಿಸಬಹುದು.

ಜಾನುವಾರುಗಳಲ್ಲಿ ರೋಗ ಹರಡುವರೀತಿ

➢ ದೂಷಿತ ಆಹಾರ ಮತ್ತು ನೀರು ಸೇವಿಸುವುದರಿಂದ ಹಾಗೂಕಣ್ಣು ಮತ್ತು ಚರ್ಮದ ಮುಖಾಂತರ ಕೃತಕ ಗರ್ಭಧಾರಣೆಯಲ್ಲಿ ಸೋಂಕಿತ ವೀರ್ಯಗಳ ಉಪಯೋಗದಿಂದ, ರೋಗಗ್ರಸ್ತ ಹೋರಿಗಳಿಂದ ತಳಿ ಸಂವರ್ಧನೆ ಮಾಡುವುದರಿಂದ ಈ ರೋಗವು ಜಾನುವಾರುಗಳಲ್ಲಿ ಹರಡುತ್ತದೆ.

➢ ರೋಗಗ್ರಸ್ತ ಜಾನುವಾರುಗಳ ಗರ್ಭಸ್ರಾವ ಹಾಗೂಮಾಸುಗಳಲ್ಲಿ ರೋಗಾಣುಗಳು ಕಂಡುಬರುತ್ತವೆ.ಅಂತಹ ರಾಸುಗಳಚಿಕಿತ್ಸೆಯಲ್ಲಿ ನಿರತರಾದವರು, ಹೈನುಗಾರರು ಈ ಖಾಯಿಲೆಗೆ ತುತ್ತಾಗುವ ಸಾಧ್ಯತೆಗಳು ಹೆಚ್ಚು.

ಜಾನುವಾರುಗಳಲ್ಲಿ ರೋಗ ಲಕ್ಷಣಗಳು

✓ ಗರ್ಭಪಾತದ ಮೊದಲು ಜನನೇಂದ್ರಿಯದಿಂದ ಬಿಳಿಸ್ರಾವ

✓ ಗರ್ಭಧರಿಸಿದ ಎಮ್ಮೆ, ಹಸುಗಳಲ್ಲಿ ಕೊನೆಯ ತ್ರಯಮಾಸಿಕದಲ್ಲಿ ಗರ್ಭಪಾತ

✓ ಮಾಸು/ಸತ್ತೆ ಹೊರಬೀಳದೇ ಗರ್ಭದಲ್ಲಿಯೇ ಉಳಿದು ಗರ್ಭಾಶಯವನ್ನುಹಾಳುಗೆಡುವುತ್ತದೆ

✓ ಕೀಲುಗಳಲ್ಲಿ ನೀರು ತುಂಬಿಕೊಂಡು ಊತ ಕಂಡುಬರುತ್ತದೆ

✓ ರೋಗಗ್ರಸ್ತ ಹೋರಿಗಳಲ್ಲಿ ವೃಷಣಗಳು ಬಾತುಕೊಳ್ಳುತ್ತವೆ

ಜಾನುವಾರುಗಳಲ್ಲಿ ಈ ರೋಗದ ನಿಯಂತ್ರಣ

→ ವರ್ಷಕ್ಕೊಂದು ಸಾರಿ ಆರೋಗ್ಯವಂತ ರಾಸುಗಳಲ್ಲಿ ರೋಗದ ಪರೀಕ್ಷೆ ಮಾಡಿಸುವುದು ಒಳಿತು. ರೋಗಗ್ರಸ್ತ ಹೋರಿಗಳಿಂದ ರೋಗ ಪ್ರಸಾರವಾಗುವುದನ್ನು ತಡೆಗಟ್ಟಲು ಆಕಳು ಮತ್ತು ಎಮ್ಮೆಗಳಲ್ಲಿ ಸೋಂಕುರಹಿತ ವೀರ್ಯಗಳನ್ನು ಬಳಸಿ ಕೃತಕ ಗರ್ಭಧಾರಣೆಗೆ ಪ್ರೋತ್ಸಾಹ ನೀಡಬೇಕು.

→ ಪ್ರತಿಬಂಧಕೋಪಾಯವಾಗಿ 4 ರಿಂದ 8 ತಿಂಗಳು ಪ್ರಾಯದ ಹೆಣ್ಣು ಎಮ್ಮೆ ಮತ್ತು ಹಸುಗಳ ಕರುಗಳಿಗೆ ತಪ್ಪದೇ ಜೀವನದಲ್ಲಿ ಒಮ್ಮೆ ಮಾತ್ರವೇ ಲಸಿಕೆ (Bruvax) ಹಾಕಿಸಬೇಕು

→ ಗರ್ಭಪಾತವಾದ ಭ್ರೂಣ, ಮಾಂಸ, ಸ್ರಾವ ಇತ್ಯಾದಿಗಳನ್ನು ದೂರ ಕೊಂಡೊಯ್ದು ಆಳವಾಗಿ ಹೂಳಬೇಕು ಅಥವಾ ಸುಡಬೇಕು.

→ ಸತ್ತ ರಾಸುಗಳನ್ನ ಯಾವ ಕಾರಣಕ್ಕೂ ಕಟುಕರಿಗೆ ಕೊಡದೆ ಆಳವಾಗಿ ಹೂಳಬೇಕು

→ ಕೊಟ್ಟಿಗೆ ಹಾಗೂ ಗರ್ಭಪಾತವಾದ ಸ್ಥಳವನ್ನು ಸೋಂಕುನಾಶಕ ದ್ರಾವಣದಿಂದ ಶುಚಿಗೊಳಿಸಬೇಕು.

→ ರೋಗಮುಕ್ತವಾಗಿರುವ ಹಿಂಡಿನಿಂದಲೇ ಹಸುಗಳನ್ನು ಖರೀದಿಸಬೇಕು.

→ ಹೊಸದಾಗಿ ಖರೀದಿಸಿದ ರಾಸನ್ನು ಕನಿಷ್ಠ 30 ದಿನಗಳವರೆಗೆ ಉಳಿದ ರಾಸುಗಳಿಂದ ದೂರವಿರಿಸಬೇಕು.

→ ಬ್ರುಸೆಲ್ಲೋಸಿಸ್ ಇರಬಹುದೆಂದು ಸಂಶಯಿಸಿದ ಸಂದರ್ಭದಲ್ಲಿ ಪ್ರಯೋಗಾಲಯಕ್ಕೆ ಮಾದರಿ ಕಳುಹಿಸಿ ರೋಗದ ಬಗ್ಗೆ ಖಚಿತಪಡಿಸಿಕೊಳ್ಳಬೇಕು ಅಥವಾ ರೋಗ ಪತ್ತೆಗೆ ಕಾಲಕಾಲಕ್ಕೆ ಹಾಲಿನ ಪರೀಕ್ಷೆ ಮಾಡಿಸಬೇಕು (ವರ್ಷಕ್ಕೆ ಕನಿಷ್ಠ 2 ಬಾರಿ)

ಸಾಮೂಹಿಕ ಲಸಿಕಾ ಕಾರ್ಯಕ್ರಮ

→ ಪಶು ಸಂಗೋಪನಾ ಇಲಾಖೆಯ ವತಿಯಿಂದ ಸಾಮೂಹಿಕ ಲಸಿಕಾ ಕಾರ್ಯಕ್ರಮ ಹಮ್ಮಿಕೊಳ್ಳಲು ಉದ್ದೇಶಿಸಿದ್ದು, ರಾಜ್ಯಾದ್ಯಂತ ಹೆಣ್ಣು ಎಮ್ಮೆ ಮತ್ತು ಹಸು ಕರುಗಳಿಗೆ ಉಚಿತವಾಗಿ ಲಸಿಕೆ ಹಾಕಾಲಾಗುವುದು. ರಾಜ್ಯಾದ್ಯಂತ 4 ರಿಂದ 8 ತಿಂಗಳ ವಯಸ್ಸಿನ ಹೆಣ್ಣು ಕರುಗಳಿಗೆ ಮಾತ್ರ ಲಸಿಕೆ ಹಾಕಲಾಗುತ್ತದೆ. ಸಾರ್ವಜನಿಕರು ಇದರ ಸದುಪಯೋಗ ಪಡೆದುಕೊಂಡು ತಮ್ಮ ಜಾನುವಾರುಗಳನ್ನು ಈ ರೋಗದಿಂದ ರಕ್ಷಿಸಕೊಳ್ಳಬೇಕು.

ಕರುಗಳ ಲಸಿಕೆಯಿಂದ ಆಗುವ

★ ಜಾನುವಾರುಗಳಲ್ಲಿ ಗರ್ಭಪಾತವಾಗುವುದನ್ನು ತಡೆಗಟ್ಟಬಹುದು

★ ಮತ್ತೆ ಮತ್ತೆ ಲಸಿಕೆ ಹಾಕಿಸುವ ಅಗತ್ಯವಿಲ್ಲ

★ 3 ರಿಂದ 5 ವರ್ಷಗಳ ವರೆಗೆ ಹಿಂಡಿನಲ್ಲಿ ರೋಗ ಪ್ರತಿಬಂಧಕ ಶಕ್ತಿ ಇರುತ್ತದೆ